# ಕಲ್ಯಾಣಂ ತುಳಸಿ ಕಲ್ಯಾಣಂ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Vol 2, Edited by Shri Pavanje Gururao, Sriman Madhwa Siddantha Granthalaya, Udupi
3. **Ref.:** https://www.youtube.com/watch?v=X9hhrlDjt_o - Write-up given along with this video.
4. **Note:** The wordings mainly are as per the book in Ref. 2 above. The wordings of the singer are matching with Ref.2. The lyrics in Ref. 1 are slightly different and are marked in yellow highlights.

ಕಾರ್ತಿಕ ಮಾಸದಲ್ಲಿ ಬರುವ ಅತಿ ಪವಿತ್ರವಾದ ಹಬ್ಬ "ಉತ್ಥಾನ ದ್ವಾದಶಿ" ಅಥವಾ "ತುಳಸಿ ಹಬ್ಬ". ಶ್ರೀಮನ್ನಾರಾಯಣನು ತನ್ನ ನಿದ್ರಾ ಮುದ್ರೆಯನ್ನು ಬಿಟ್ಟು ಏಳುವ ದಿನವಾದ್ದರಿಂದ ಇದನ್ನು "ಉತ್ಥಾನ ದ್ವಾದಶಿ" ಎಂದು ಕರೆಯುತ್ತಾರೆ. (ಉತ್ಥಾನ ಎಂದರೆ ಏಳುವುದು ಎಂದರ್ಥ). ಹಾಗೆ ಇದು ಶ್ರೀ ತುಳಸಿಯು ಶ್ರೀಮನ್ನಾರಾಯಣನನ್ನು ವಿವಾಹವಾದ ಮಹಾ ಮುಹೂರ್ತವಂತೆ. ಮಹಿಳೆಯರಿಗೆ ಪವಿತ್ರ ಹಾಗು ವಿಶೇಷವಾದ ಈ ಹಬ್ಬದಲ್ಲಿ ಗೋಧೂಳಿ ಸಮಯದಲ್ಲಿ ತುಳಸಿಯ ಆರಾಧನೆ ಮಾಡುವುದು ಪದ್ಧತಿ. ಸಾಮಾನ್ಯವಾಗಿ ಮನೆಯ ಮುಂದಿನ ತುಳಸಿ ಕಟ್ಟೆಯಲ್ಲಿ ಶ್ರೀ ಕೃಷ್ಣನ ವಿಗ್ರಹವನ್ನು ಪ್ರತಿಷ್ಠಾಪಿಸಿ ಷೋಡಶೋಪಚಾರ ಪೂಜೆಯೊಂದಿಗೆ ತುಳಸಿಯನ್ನು ಆರಾಧಿಸುವುದು ಈ ಹಬ್ಬದ ಪ್ರಮುಖ ವಿಶೇಷವಾಗಿದೆ.

ತುಳಸಿ ಹಾಗು ಕೃಷ್ಣ ಪೂಜೆಯ ಬಗ್ಗೆ ಶ್ರೀ ಪುರಂದರ ದಾಸರು ರಚಿಸಿರುವ ಈ ಕೃತಿಯನ್ನು ಓದಿ, ಕೇಳಿ, ಹಾಡಿ, ಭಗವಂತನನ್ನು ಆರಾಧಿಸಿ ಕೃತಾರ್ಥರಾಗೋಣ.

ರಾಗ: ಸೌರಾಷ್ಟ್ರ(ಪೂರ್ವಿ) ತಾಳ: ಆದಿ

ಕಲ್ಯಾಣಂ ತುಳಸಿ ಕಲ್ಯಾಣಂ
ಕಲ್ಯಾಣಂ ತುಳಸಿ ಕಲ್ಯಾಣಂ ॥ ಪ ॥

ಕಲ್ಯಾಣವೇ (ಕಲ್ಯಾಣವು) ನಮ್ಮ ಕೃಷ್ಣ ಶ್ರೀ ತುಳಸಿಗೆ
ಬಲ್ಲಿದ ಶ್ರೀ ವಾಸುದೇವನಿಗೆ ॥ ಅಪ ॥

ಅಂಗಳದೊಳಗೆಲ್ಲ ತುಳಸಿ ವನಮಾಡಿ
ಶೃಂಗಾರವ ಮಾಡಿ (ಮಾಡೆ) ಶೀಘ್ರದಿಂದ
ಕಂಗಳ ಪಾಪವ ಪರಿಹರಿಸುವ ಮುದ್ದು
ರಂಗ ಬಂದಲ್ಲಿ ತಾ ನೆಲೆಸಿದನೂ (ನೆಲೆಸಿಹನು) ॥ 1 ॥

ಮಿಂದು ಮಡಿಯನುಟ್ಟು ಸಂದೇಹವ ಬಿಟ್ಟು
ತಂದ ಶ್ರೀಗಂಧಾಕ್ಷತೆಗಳಿಂದ
ಸಿಂಧು ಶಯನನ ವೃಂದಾವನದಿ (ವೃಂದಾವನದಲಿ) ಪೂಜಿಸೆ
ಕುಂದದ ಭಾಗ್ಯವ ಕೊಡುತಿಹಳು ॥ 2 ॥

ಭಕ್ಷ್ಯ ಭೋಜ್ಯಂಗಳ ನೈವೇದ್ಯವನಿತ್ತು
ಲಕ್ಷ ಬತ್ತಿಯ ದೀಪವ ಹಚ್ಚಿ (ಹಚ್ಚಿಡೆ)
ಅಧೋಕ್ಷಜ ಸಹಿತ ವೃಂದಾವನ ಪೂಜಿಸೆ
ಸಾಕ್ಷಾತು ಮೋಕ್ಷವ ಕೊಡುತಿಹಳು ॥ 3 ॥

ಉತ್ಥಾನ ದ್ವಾದಶಿ ದಿವಸದಲಿ ಕೃಷ್ಣಾ
ಉತ್ತಮ ತುಳಸಿಗೆ ವಿವಾಹವ
ಚಿತ್ತ ನಿರ್ಮಲರಾಗಿ ಮಾಡಿದವರಿಗೆ
ಉತ್ತಮ ಗತಿಯೀವ ಪುರಂದರ ವಿಠಲ ॥ 4 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಕಲ್ಯಾಣ** = ಮಂಗಳ
**ಉತ್ಥಾನ ದ್ವಾದಶಿ** = ಕಾರ್ತೀಕ ಶುದ್ಧ ದ್ವಾದಶಿ (ಆಷಾಡ ಶುದ್ಧ ಏಕಾದಶಿಗೆ ಶಯನೇಕಾದಶೀ ಎಂಬ ಹೆಸರಿದೆ)

**Classification:** Keerthane
**Ankita:** purandara vittala
**Location:** NA
**Category:** Tulasi Song
**Group Words:** tulasi, kalyana, krishna, maduve, kaadu, gandha, mukti, chitta, madi, papa, ranga,
**Pravachana:** NA
**Explanation:** NA